ಶ್ರೀ ಮಂಜುನಾಥ ಸಿ. ಕುನ್ನೂರು : ಮಾನ್ಯ ಸಭಾಧ್ಯಕ್ಷರೇ, ಸಿದ್ದಾಪುರ ಮತ್ತು ಬಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆಗೆ ಜಲ ಶುದ್ಧೀಕರಣ ಘಟಕವನ್ನು ಟೆಂಡರ್ ಕರೆಯಲಾಗಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೇನೆ, ಅದಕ್ಕೆ ಹೌದು ಅಂತ ಉತ್ತರ ಕೊಟ್ಟಿದ್ದಾರೆ. ಜೊತೆಗೆ ಈ ಯೋಜನೆ ಯಾವ ಹಂತದಲ್ಲಿ ಎಂದಾಗ ನಾಗನೂರು ಕೆರೆ ಆಳ ತೆಗೆಯತಕ್ಕ ಕೆಲಸ ಪ್ರಗತಿಯಲ್ಲಿದೆ ಮತ್ತು ಈ ಕೆಲಸವನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮಕ್ಕೆ ವಹಿಸಿ ಕೊಡಲಾಗಿದೆ. ಹಾಗೂ ಈ ಯೋಜನೆಯ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ. ಈ ಜಲ ಶುದ್ಧೀಕರಣ ಘಟಕವನ್ನು ಕೂಡಲೇ ಅಲ್ಲಿ ಪ್ರಾರಂಭಿಸುವುದು ಅತಿ ಅವಶ್ಯಕತೆ ಇದೆ. ಈ ಜಲ ಶುದ್ಧೀಕರಣ ಘಟಕಕ್ಕೆ ಬೇಕಾಗಿರತಕ್ಕಂತಹ ಜಮೀನನ್ನು ಕೂಡ ಅಲ್ಲಿ ಭೂ ಮಾಲೀಕರಿಂದ ನಮ್ಮ ಕೆ.ಯು.ಡಬ್ಲ್ಯೂ ಇಲಾಖೆಯವರಿಗೆ ವಹಿಸಿಕೊಡಲಾಗಿದೆ. ಒಂದು ವೇಳೆ ಈ ಯೋಜನೆ ಹಂತ ಹಂತವಾಗಿ ತೆಗೆದುಕೊಳ್ಳುತ್ತಾ ನಾವು ನಿಧಾನ ಮಾಡುತ್ತಾ ಹೋದರೆ ಇದರ ಅಂದಾಜುವೆಚ್ಚ ಬಹಳ ಹೆಚ್ಚಾಗುತ್ತದೆ. ಆ ಕಾರಣದಿಂದ ಆದಷ್ಟು ಬೇಗನೆ ಮಾಡಿಕೊಡಬೇಕು ಅಂತ ಈ ವಿಚಾರವನ್ನು ಈ ಸಂದರ್ಭದಲ್ಲಿ ಕೇಳುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಯೋಜನೆಯನ್ನು ತೆಗೆದುಕೊಂಡಾಗ ಶಿಗ್ಗಾವ್, ಕಲ್ಲೂರ್ ಮತ್ತು ಬಂಕಾಪುರಗಳ ಮಧ್ಯದಲ್ಲಿ ಬರತಕ್ಕಂತಹ ಕೆಲವು ಜಿಲ್ಲೆಗಳನ್ನು ಅವರು ಆಯ್ಕೆ ಮಾಡಿಕೊಂಡಿರುವುದಿಲ್ಲ ಅಲ್ಲಿ ಬರತಕ್ಕಂತಹ ಹಳ್ಳಿಗಳನ್ನು ಮತ್ತೆ ನೂತನ ಶಿಗ್ಗಾವಿಯಲ್ಲಿ ಕೆ.ಎಸ್.ಆರ್.ಪಿ. ಬಟಾಲಿಯನ್ ಕೂಡ ಆಗಿದೆ. ಹಾಗಾಗಿ ಈ ಜನಸಂಖ್ಯೆ ಪ್ರಮಾಣಕ್ಕೆ ಅನುಸಾರವಾಗಿ ನಾವು ಒಂದು ಕೆರೆಯ ಮತ್ತು ಯೋಜನೆಯ ಕೆಲಸವನ್ನು ಕೈಗೊಳ್ಳಬೇಕೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಚೌಡರೆಡ್ಡಿ : ಸನ್ಮಾನ್ಯ ಉಪಾಧ್ಯಕ್ಷರೇ, ಪರಿಶೀಲಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಶ್ರಯ ಅಂಬೇಡ್ಕರ್ ಮನೆಗಳು.

603 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಗೆ ಮಂಜೂರಾದ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ ಮಂಜೂರಾಗಿರುವ ಆಶ್ರಯ ಅಂಬೇಡ್ಕರ್ ಮನೆಗಳೆಷ್ಟು?

ಇ) ಈ ಅಂಕಿ ಅಂಶವು ಸರ್ಕಾರಕ್ಕೆ ತೃಪ್ತಿಕರವಾಗಿದೆಯೇ?

ಶ್ರೀ ಗೋಪಿನಾಥ್ ಆರ್ ಸಾಂಧ್ರ (ವಸತಿ ಸಚಿವರು) :

ಅ) ಆಶ್ರಯ ಮನೆಗಳು - 3000

ಡಾ:ಅಂಬೇಡ್ಕರ್ ಯೋಜನೆಯ ಮನೆಗಳು - 861

ಆ)

ವಿಧಾನಸಭಾ ಕ್ಷೇತ್ರದ ಹೆಸರು	ಆಶ್ರಯ ಮನೆಗಳು	ಡಾ: ಅಂಬೇಡ್ಕರ್ ಮನೆಗಳು
1) ಶೃಂಗೇರಿ	500	98
2) ಮೂಡಿಗೆರೆ	500	122
3) ಚಿಕ್ಕಮಗಳೂರು	500	198
4) ಬೀರೂರು	500	148

5) ಕಡೂರು 500 147
6) ತರೀಕೆರೆ 500 148

ಇ) ಹೌದು. ಇದು ಮುಂದುವರೆದ ಯೋಜನೆಯಾಗಿದೆ.

ಕೆ.ಎಸ್.ಐ.ಸಿ. ಹಾಗೂ ಕೆ.ಎಸ್.ಎಂ.ಬಿ.ಯ ಪ್ರಗತಿ.

572 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಸ್.ಐ.ಸಿ. ಮತ್ತು ಕೆ.ಎಸ್.ಎಂ.ಬಿ.ಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಅವುಗಳ ಕಾರ್ಯಚಟುವಟಿಕೆಗಳೇನು;

ಇ) ಅವುಗಳು ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಪ್ರಮಾಣದ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿದೆ;

ಈ) ಅದಕ್ಕೆ ಕಾರಣಗಳೇನು?

ಉ) ಅದನ್ನು ತಪ್ಪಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಊ) ಅವುಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ: ಜಿ.ಪರಮೇಶ್ವರ (ರೇಷ್ಮೆ ರಾಜ್ಯ ಸಚಿವರು.) :

ಅ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವನ್ನು 1980 ರಲ್ಲಿ ಪ್ರಾರಂಭಿಸಲಾಯ್ತು.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯನ್ನು 5-11-1979ರಲ್ಲಿ ಪ್ರಾರಂಭಿಸಲಾಯ್ತು.

ಆ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವು ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರಿನಲ್ಲಿ ಅಪ್ಪಟ ರೇಷ್ಮೆ ಬಟ್ಟೆಗಳು (ಜರಿ, ಸಾದಾ ಮತ್ತು ಮುದ್ರಿತ) ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣದಲ್ಲಿ ರೇಷ್ಮೆದಾರ, ನಾಯಿಲ್ ಹಾಗೂ ಟಿ. ನರಸೀಪುರ ಮತ್ತು ಕನಕಪುರ ಘಟಕಗಳಲ್ಲಿ ರೇಷ್ಮೆ ದಾರಗಳನ್ನು ಉತ್ಪತ್ತಿ ಮಾಡಲಾಗುತ್ತಿದೆ.

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಸ್ಥಾಪನೆಯ ಮುಖ್ಯ ಉದ್ದೇಶ, ರೇಷ್ಮೆ ಮಾರುಕಟ್ಟೆಯಲ್ಲಿ ನೂಲಿನ ಬೆಲೆಯು ಏರುಪೇರಾಗದಂತೆ ನೋಡಿಕೊಂಡು ಬೆಲೆ ಸ್ಥಿರೀಕರಣ ಮಾಡುವುದು, ನೂಲು ಬಿಚ್ಚುವವರ ಹಾಗೂ ರೇಷ್ಮೆ ಬೆಳೆಗಾರರ ಹಿತಾಸಕ್ತಿಯನ್ನು ಕಾಪಾಡುವುದು.

ಇ) ಕೆ.ಎಸ್.ಐ.ಸಿ.ಯ ನಷ್ಟದ ವಿವರಗಳು

		ಲಕ್ಷ ರೂ.ಗಳಲ್ಲಿ
1981-82 (7 ತಿಂಗಳು)	-	15.40
1982-83	-	43.74
1983-84	-	26.86
1984-85	-	277.84
1985-86	-	340.42
1986-87	-	425.91
1987-88	-	376.48
1988-89	-	388.79
1989-90	-	466.64
1990-91	-	347.25